**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>**
**<u>ಸಿಸಿ ನಂಬರ್ 36/2022</u>**

<u>ಫಿರ್ಯಾದಿ</u> ಸರಕಾರ **(**ಗುತ್ತಲ ಪೊಲೀಸ ಠಾಣೆ **).**

ವಿರುದ್ಧ

<u>ಆರೋಪಿ:</u> **2.** ಮಂಜಪ್ಪ ತಂದೆ ಸಣ್ಣರಂಗಪ್ಪ ಬಿ.ಆರ್
ವಯಾಃ **40** ವರ್ಷ**,** ಉದ್ಯೋಗಃ ಕೂಲಿ
ಸಾಃ ಹಿರೇಗೊಣಗೇರಿ ತಾಃಹೊನ್ನಾಳಿ ಜಿಃ ದಾವಣಗೆರೆ

<u>ಆಪಾದನೆ</u>

ದಿಃ29.04.2021 ರಂದು ಸಾಯಂಕಾಲ 5-00 ಘಂಟೆ ಸುಮಾರಿಗೆ ಗುತ್ತಲ ಪೊಲೀಸ ಠಾಣೆ ಸರಹದ್ದಿನ ಹೊಸಮೇಲ್ಮೂರಿ ಗ್ರಾಮದಿಂದ ಹಳೇಮೇಲ್ಮೂರ ಗ್ರಾಮದ ರಸ್ತೆಯ ಮೇಲೆ ರಾಗಿ ಇವರ ಜಮೀನಿನ ಹತ್ತಿರ ಪಿರ್ಯಾದಿಯ ತಾಯಿ ನಡೆದುಕೊಂಡು ಬರುತ್ತಿದ್ದಾಗ 1ನೇ ಆರೋಪಿ ಅಧಿಕೃತ ಚಾಲನಾ ಪರವಾನಿಗೆ ಇಲ್ಲದೇ, ಅಶೋಕ ಲೈಲ್ಯಾಂಡ ಮಿನಿ ವಾಹನ ಸಂಖ್ಯೆಃ ಕೆಎ-17/ಡಿ-7218ನೇದ್ದನ್ನು ಹಳೆಮೇಲ್ಮೂರಿ ಕಡೆಯಿಂದ ಹೊಸಮೇಲ್ಮೂರಿ ಕಡೆಗೆ ಅತೀ ಜೋರಾಗಿ ನಿರ್ಲಕ್ಷತನದಿಂದ, ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಾಲನೆ ಮಾಡಿಕೊಂಡು ಬಂದು ಪಿರ್ಯಾದಿ ತಾಯಿಗೆ ಡಿಕ್ಕಿಮಾಡಿ ಅಪಘಾತಪಡಿಸಿ, ಅವರ ಎರಡು ಗಲ್ಲಕ್ಕೆ, ಮುಖಕ್ಕೆ ಬಲಗೈ ಮೊಣಕೈ ಮತ್ತು ಮುಂಗೈಗೆ ಹೊಟ್ಟೆಯ ಮೇಲೆ, ಎಡ ಪಕ್ಕಡಿಗೆ, ಎಡಮೊಣಕಾಲಿಗೆ ಪೆಟ್ಟು ಬಿದ್ದು, ತೆರಚಿದ ಗಾಯಗಳು ಆಗಿ, ತಲೆಯ ಎಡಭಾಗದಲ್ಲಿ ಬಲವಾದ ಏಟು ಬಿದ್ದು ಮೂಗಿನಿಂದ ರಕ್ತ ಬಂದು ಉಪಚಾರಕ್ಕೆ ಗುತ್ತಲ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಉಪಚಾರ ಫಲಿಸದೇ ಮರಣ ಹೊಂದುವಂತೆ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂಃ **279, 304(**ಎ**)** ಮತ್ತು ಕಲಂ**.3** ರೆ/ವಿ **181,** ಎಂ.ವಿ ಆ್ಯಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

2ನೇ ಆರೋಪಿಯಾದ ನೀನು ಅಶೋಕ ಲೈಲ್ಯಾಂಡ ಮಿನಿ ವಾಹನ ಸಂಖ್ಯೆಃ ಕೆಎ-17/ಡಿ-7218ನೇದ್ದರ ಮಾಲೀಕರಾಗಿದ್ದು, ಸದರಿ ಮಿನಿ ವಾಹನವನ್ನು

ಚಾಲನೆ ಮಾಡಲು ಪರವಾನಿಗೆ ಇಲ್ಲದ 1 ನೇ ಆರೋಪಿತನಿಗೆ ಚಲಾಯಿಸಲು ನೀಡಿದ್ದು, ಕಾರಣ ಮೋಟಾರು ವಾಹನ ಕಾಯ್ದೆ ಕಲಂ.**5** ಸಹಕಲಂ**180** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಈ ಮೇಲ್ಕಂಡ ಆಪಾದನೆ ವಿಚಾರಣೆಗೊಳಪಡಿಸಲು ನಿರ್ದೇಶಿಸಿದ್ದೇನೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್**36/2022**

ದಿನಾಂಕಃ **17.10.2025**

ಫಿರ್ಯಾದಿ ಸರಕಾರ (ಹಾವೇರಿ ಗ್ರಾಮೀಣಪೊಲೀಸ ಠಾಣೆ).

ವಿರುದ್ದ

ಆರೋಪಿ **2.** ಮಂಜಪ್ಪ ತಂದೆ ಸಣ್ಣರಂಗಪ್ಪ ಬಿ.ಆರ್

1. ಈ ಮೇಲೆ ಹೇಳಿದ ಆಪಾದನೆಯು ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿತನ ಸಹಿ: